doc-538
T.P-2

Reg No B G 155 2—9—72

55th Year of Publication 'Satyavadi' daily, Mysore 4

In State – The First
**Golden Jubilee Celebrated Paper**
★
News, Views, Dharmic Moral Ethical Matters

# ಸತ್ಯವಾದಿ

ರಾಜ್ಯದಲ್ಲಿ ಪ್ರಥಮ.
ಸುವರ್ಣ
ಮಹೋತ್ಸವ
ಸಂಭ್ರಮವನ್ನು
ಪತ್ರಿಕೆ

ಸ್ಥಾಪಕರು: ಅರಮನೆ ಸಿರಸ್ತೇದಾರ್ ಎಂ.ವಿ. ಸುಬ್ಬರಾವ್ ಸಂಪಾದಕರು: ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [ 2 ಪೈಸೆ

## ರಾವಲ್ಪಿಂಡಿ ಗೋಳೀಬಾರ್‌ನಲ್ಲಿ ಮೂವರ ಮರಣ

### ಹೊಟ್ಟೆಗಿಲ್ಲದೆ ಮಕ್ಕಳ ಮಾರಾಟ

ಕೊಥೆಗುಡೆಂ— ತೀವ್ರ ಹೊಟ್ಟೆಗಿಲ್ಲದಿರುವುದು ಮತ್ತು ನಿರುದ್ಯೋಗ ಸಹಿಸಲಾರದೆ ಪರಿಶಿಷ್ಟ ಜನಾಂಗದ ದಂಪತಿಗಳು ತಮ್ಮ ಇಬ್ಬರು ಯೌವನಸ್ಥ ಗಂಡು ಮಕ್ಕಳನ್ನು ರೂ 110 ಕೆ ಮಾರಿದರೆಂದು ಪಂಚಾಯಿತ್ ಅಧ್ಯಕ್ಷೆ ಶ್ರೀ ಸೀತಾರಾಂ ಹೇಳಿದರು.

○

### ಕುಡಿಯುವ ನೀರಿಗೆ ರೇರ್ಷ

ಗದಗ್— ಕುಡಿಯುವನೀರಿನ ಅಭಾವ ತೀವ್ರವಾಗಿದ್ದು, ಹುಬ್ಬಳ್ಳಿ ಹೆತ್ತಿರದ ಹೆಡಸೂರು ಗ್ರಾಮದಲ್ಲಿ ಕುಡಿಯುವ ನೀರಿನ ರೇರ್ಷ ಮಾಡಿ, ಅದಕ್ಕಾಗಿ ರೇರ್ಷ ಕಾರ್ಡುಗಳು ಕೊಡಲಾಗಿವೆ.

○

### ಇದರಲ್ಲಿ ಆಶ್ಚರ್ಯವಿಲ್ಲ

ನವದೆಹಲಿ— ಕೆಲವು ರಾಜ್ಯಗಳಲ್ಲಿ ಭೂಮಿಯಿಲ್ಲದ ಕೂಲಿಯವರಿಗೆ ಕೊಡಲಾಗಿದ್ದ ಭೂಮಿಯ ಮಾಲಿಕತ್ವವು ಅವರಿಗಿರದೆ, ಅವರು ಸಾಲಾ ಪಡೆದಿರುವವರ ಸ್ವಾಧೀನದಲ್ಲಿದೆ ಎಂದು ರಾಜ್ಯಸಭೆಯಲ್ಲಿ ತಿಳಿಸಲಾಯಿತು.

★

### ಪಾಕಿಸ್ತಾ ಬಗ್ಗೆ ಗಡಿನಾಡು ಗಾಂಧಿ ಹೇಳಿಕೆ

ನವದೆಹಲಿ– ಗಡಿನಾಡು ಗಾಂಧಿ ಖಾ ಅಬ್ದುಲ್ ಗಫಾರ್ ಖಾನರು ಪಾಕಿಸ್ತಾನದ ನಾಯಕತ್ವವನ್ನು ಕಟುವಾಗಿ ಟೀಕಿಸಿ, 25 ವರ್ಷಗಳ ಅನುಭವ ಮತ್ತು ಬಂಗ್ಲಾದೇಶದ ಘಟನೆಗಳಿಂದಲೂ ಅವರು ಏನೂ ಕಲಿಯಲಿಲ್ಲವೆಂದಿರುವರು

★

### ಬಟ್ಟೆ ಬೆಲೆ ಏರಿಕೆ ತಡೆಗಟ್ಟಲು

ನವದೆಹಲಿ— ಬಟ್ಟೆ ಬೆಲೆ ಏರಿಕೆ ತಡೆಗಟ್ಟಲು ಬಟ್ಟೆ ಕೈಗಾರಿಕೆಯವರ ಜೇಶಾದ್ಯಂತ ನ್ಯಾಯಬೆಲೆ ಅಂಗಡಿಗಳನ್ನು ತೆರೆಯಲು ಸೂಚಿಸಲಾಗಿದೆಯೆಂದು ವಕ್ತಿಯಾಗಿದೆ.

### ಶುದ್ಧೀಕರಣ

ಗದಗ್— ಆಡಳಿತ ಪಕ್ಷದ ಶುದ್ಧೀಕರಣದ ಆವಶ್ಯಕತೆ ಇದ್ದರೆ ಅದು ಜನರಿಂದಾಗಬೇಕೆಂದು ಮುಖ್ಯಮಂತ್ರಿ ಶ್ರೀ ದೇವರಾಜ ಅರಸ್ ರವರು ಹೇಳಿದರು.

★

### ಕಮ್ಯೂನಿಸ್ಟರ ಚಳವಳಿ

ನವದೆಹಲಿ— ಕೇಂದ್ರ ಸರಕಾರವು ಪ್ರಗತಿ ನೀತಿಯಿಂದ ವಾಲುತ್ತಿರುವದನ್ನು ತಡೆಗಟ್ಟಲು ಕಮ್ಯೂನಿಸ್ಟು ಪಾರ್ಟಿ ದೇಶವ್ಯಾಪ್ತ ಸಾಮೂಹಿಕ ಸತ್ಯಾಗ್ರಹ ಹೂಡಲಿರುವುದೆನ್ನಲಾಗಿದೆ.

★

### ಪ್ರತಿಭಟನೆ – ಗೋಳೀಬಾರ್

ರಾವಲ್ಪಿಂಡಿ– ಎಲ್ಲ ಖಾಸಗೀ ಮಾಲೀಕತ್ವದ ಸ್ಕೂಲು ಕಾಲೇಜುಗಳನ್ನು ರಾಷ್ಟ್ರೀಕರಣ ಮಾಡುವುದನ್ನು ಪ್ರತಿಭಟಿಸಿ, ಪಾಕಿಸ್ತಾನದ ಬಹು ದೊಡ್ಡ ಕ್ರಿಶ್ಚಿಯರ್ ವಿದ್ಯಾ ಸಂಸ್ಥೆಯಾದ ಗೋರ್ಡನ್ ಕಾಲೇಜಿನಿಂದ 500 ಕ್ರೈಸ್ತ ಮಹಿಳೆಯರೂ, ಅದರೆಡರನ್ನು ಪುರುಷರೂ ಅಧ್ಯಕ್ಷ ಭುಟ್ಟೋ ರವರ ನಿವಾಸಕ್ಕೆ ಹೋದಾಗ ಪೋಲೀಸರ್ ಲಾಠಿ ಛಾರ್ಜು, ಗೋಳಿಬಾರೂ ನಡೆದು 3 ಮಂದಿ ಸತ್ತು, 60 ಮಂದಿ ಗಾಯಗೊಂಡರು.

★

### ಕುದುರೆ ಜೂಜು

ಕಲ್ಕತ್ತಾ— ಗುರುವಾರದ ಕುದುರೆ ಜೂಜಿನಲ್ಲಿ ನಂಬಿದ್ದ ಕುದುರೆಗಳು ಕೈಕೊಟ್ಟದ್ದರಿಂದ, ಬಾಜಿಕಟ್ಟು ಅಂಗಡಿಯವರಿಗೆ ಯತೇಚ್ಛೆ ಫಲವಾದಿಯಾಗಿ ಖುಷಿ ಪಟ್ಟರು – ಜಾಕ್‌ಪಾಟ್‌ನಲ್ಲಿ 2 ಟಿಕೇಟು ಗಳಿಗೆ ತಲಾ ರೂ. 160086 ಸಿಕ್ಕಿತು.

★ ಕೊಹಿಮ— ನಾಗಾಲ್ಯಾಂಡಿನ 3 ಭೂಗತ ಸಂಸ್ಥೆಗಳನ್ನು ನ್ಯಾಯಬಾಹಿರ ಎಂದು ಕೇಂದ್ರ ಸರಕಾರ ಸಾರಿದೆ.

### ಪರಿಹಾರ ಕಾರ್ಯ

ಹುಬ್ಬಳ್ಳಿ— ಉತ್ಕಟ ಪರಿಸ್ಥಿತಿಯಿಂದ ಪಾರಾಗುವವರೆಗೆ ಪರಿಹಾರ ಕಾರ್ಯ ನಡೆಸಲಾಗುತ್ತಿರುವುದೆಂದು ಮುಖ್ಯ ಮಂತ್ರಿ ಶ್ರೀ ದೇವರಾಜ ಅರಸ್ ರವರು ಜನರಿಗೆ ಭರವಸೆ ನೀಡಿದರು

★

### ಭೀಕರ ಕೊಲೆ – ಆತ್ಮಹತ್ಯೆ

ಬೆಂಗಳೂರು— ಸಂಸಾರದಲ್ಲಿ ಉಂಟಾದ ಜಗಳದಲ್ಲಿ ಸೂಯೇಜ್ ಬೋರ್ಡು ಎಂಜಿನಿಯರ್ ಶ್ರೀ ಬಸವರಾಜು ರವರು ತಮ್ಮ ಪತ್ನಿ ವಾಣಿವಿಲಾಸ ಆಸ್ಪತ್ರೆಯ ಡಾಕ್ಟರ್ ಆದ ತಮ್ಮ ಪತ್ನಿ ಶ್ರೀ ಸಣ್ಣ ಬೋರಮ್ಮನನ್ನು ಕಬ್ಬಿಣದ ಸಲಾಕೆಯಿಂದ ಹೊಡೆದು ಕೊಂದು, ನಂತರ ತಾವು ಸುಟ್ಟುಕೊಂಡು ಸತ್ತರು.

★

### ಲಂಚಕೋರ ಐ ಪಿ ಎಸ್ ಅಧಿಕಾರಿ

ಕಲ್ಕತ್ತಾ— ಪೋಲೀಸು ಡೆಪ್ಯೂಟಿ ಕಮಿಷನರ್ ಶ್ರೀ ಎಸ್. ಜೆ. ಫಿಲಿಪ್ ಐಪಿಎಸ್ ರವರು ಲಂಚ ಸ್ವೀಕರಿಸುತ್ತಿದ್ದಾಗ ಹಿಡಿಯಲ್ಪಟ್ಟರೆಂದು ಮುಖ್ಯ ಮಂತ್ರಿ ಶ್ರೀ ಸಿದ್ಧಾರ್ಥ ಶಂಕರ್ ಪತ್ರಿಕೆಯವರಿಗೆ ತಿಳಿಸಿದರು.

●

### ಎಂ ಪಿ ಗಳಿಂದಲೂ ಲಂಚ ಕೇಳಿಕೆ

ನವದೆಹಲಿ— ಲೋಕಸಭೆಯಲ್ಲಿ ಕಾಂಗ್ರೆಸ್ ಸದಸ್ಯ ಶ್ರೀ ಎಸ್. ಕೆ. ಪಿ. ಸಾಲ್ವೆ ರವರು, ತಾವು ಜೀವವಿಮಾ ಸಂಸ್ಥೆಯಿಂದ ಮನೆಕಟ್ಟಲು ಸಾಲಕೇಳಿದ್ದಾಗಿಯೂ, ಫೈಲ್ ಜಿಯು ಬೇಗ ವ್ಯವಸ್ಥೆಯಾಗಲು ಕೆಲವು ಸಾವಿರ ರೂ.ಗಳ ಲಂಚಕೊಡಬೇಕೆಂದು ಕೇಳಿಯಬಂದಿತೆಂದೂ ವಿವರಿಸಿದರು.

ಮೈಸೂರು— ದಸರಾ ಕ್ರೀಡಾ ಸ್ಪರ್ಧೆಗಳಲ್ಲಿ ಪ್ರಪ್ರಥಮವಾಗಿ ಬಾಕ್ಸಿಂಗ್ ಸೇರಿಸಲಾಗಿದೆ.

## Mysore Races 1972

**6th Day,** Sunday 3rd September 1972

Card of 6 Races

First Race begins at 2 00 p. m

ಹೊಸ ಜಾತಿಯ ಹಣ್ಣು ತರಕಾರಿ

ಜಗತ್ತಿನಲ್ಲಿ ಒಂದು ಸಾವಿರಕ್ಕೂ ಹೆಚ್ಚಿನ ಬಗ್ಗೆಯ ದ್ರಾಕ್ಷಿಹಣ್ಣುಗಳಿವೆ : ಮುಂದಿನ 12000 ಬಗೆಯ ತರಕಾರಿಗಳು ಈಗ ಬೆಳೆಯಲಾಗುತ್ತಿದೆ ಎಂಬುದನ್ನು ನೀವು ನಂಬುವಿರಾ ? ಆಷ್ಟೇ ಏಕೆ, 1000 ಬಗೆಯ ದ್ರಾಕ್ಷಿಹಣ್ಣುಗಳನ್ನು ಸಂಗ್ರಹಿಸಿಟ್ಟಿರುವ ಸಂಸ್ಥೆಯೊಂದು ಬೆಂಗಳೂರಿನಲ್ಲಿದೆ ಎಂದರೆ ನಿಮಗೆ ನಂಬಿಕೆ ಬರುವುದೆ? ಆದರೆ ಅದು ನಿಜ

ಬೆಂಗಳೂರಿಗೆ 15 ಮೈಲಿ ಪರಿಸರದಲ್ಲಿ ಪ್ರಕೃತಿ ಸೌಂದರ್ಯಕ್ಕೆ ಹೆಸರಾದ ಜಿಕ್ಕಬಳ್ಳಾಪುರದಲ್ಲಿರುವ ಭಾರತೀಯ ತೋಟಗಾರಿಕೆ ಸಂಶೋಧನಾ ಸಂಸ್ಥೆಯು ಜಗತ್ತಿನಾದ್ಯಂತ ದೊರೆಯುವ ಎಲ್ಲಾ ಜಾತಿಯ ಹಣ್ಣುಗಳು, ತರಕಾರಿ, ಹೂ ಮತ್ತು ಸಂಬಾರು ವಸ್ತುಗಳನ್ನು ಸಂಗ್ರಹಿಸಿದೆ ; ಸಂಗ್ರಹಣ ಕಾರ್ಯದೊಂದಿಗೆ ಹಣ್ಣು, ತರಕಾರಿ ಇತ್ಯಾದಿಗಳನ್ನು ಹೊಸ ವಿಧಾನ ಮೂಲಕ ಬೆಳೆಯುವ ಬಗ್ಗೆಯೂ ಸಂಶೋಧನೆಯನ್ನೂ ನಡೆಸುತ್ತಿದೆ.

★ ಹೈದರಾಬಾದು — ಇಲ್ಲಿಯ ಜೂನಲ್ಲಿ ಸಿಂಹದ ಪಾರ್ಕನ್ನು ಭಾರತ ಸರಕಾರ ನಿರ್ಮಿಸಲಿದೆಯೆಂದು ಪ್ರವಾಸ ಮಂತ್ರಿ ಡಾ || ಸರೋಜಿನಿ ಮಹಿಷಿ ಹೇಳಿದರು.

ದಿವ್ಯವಾಣಿ

ಕುರುಡರ ದೇಶದಲ್ಲಿ ಒಂದು ಕಣ್ಣಿದ್ದವನೇ ರಾಜ — ಎರಾಸ್ಮಸ್


ವುಡ್‌ಲ್ಯಾಂಡ್ 1-9-72 ರಿಂದ ಅಮೋಘ 2 ನೇ ವಾರ

ರಾಜೇಂದ್ರ ಕುಮಾರ್ ಅರ್ಪಿಸುವ

ಟಾಂಗೇವಾಲಾ

ಹಿಂದಿ ಈಸ್ಟ್‌ಮನ್ ಕಲರ್

ಪಾತ್ರ — ರಾಜೇಂದ್ರ ಕುಮಾರ್ ಮುಮ್ತಾಜ್ ಐ. ಎಸ್. ಜೋಹರ್

ಸಂಗೀತ – ನೌಷದ್ ನಿರ್ದೇಶನ – ನರೇಶ್ ಕುಮಾರ್

ಬೆಳಿಗಿನ ಪ್ರದರ್ಶನ 10-30 ಕ್ಕೆ ಜಾನ್‌ವರ್

ಅಪೆರಾ 31 8 72 ರಿಂದ

— ಅತ್ಯಮೋಘ ಈಸ್ಟ್‌ಮನ್ ಕಲರ್ ಹಿಂದಿ ಚಿತ್ರ —

ಬುಡಾ ಮಿಲ್ ಗಯಾ

ನಟವರ್ಗ— ನವೀನ್ ನಿಶ್ಚಲ್, ಅರ್ಚನಾ, ಸೋನಿಯಾ ಸಹಾನಿ
ಓಂ. ಪ್ರಕಾಶ್, ಲಲಿತಾ ಪವಾರ್
ಪ್ರತಿದಿನ 3 ಪ್ರದರ್ಶನಗಳು

Contribute Liberally
to the National Defence Fund



Edited Printedand Published by Dharmapracharanirata M S Krishna Rao ( Propretor ) at the Satyavadi Press Chamarajapuram Mysore


ಮಾನವನು ಕೀಳು ಸೃಷ್ಟಿಯ ಧಣಿ, ಶ್ರೀಷ್ಠನೆನ್ನುವುದು ಸೊಕ್ಕಿನ ಕಲ್ಪನೆ ಬದುಕಿಗೆ ಮಹತ್ ಶಕ್ತಿ ಕೊಡಲ್ಪಟ್ಟ ಅವನು ಮೃಗಸಾಮ್ರಾಜ್ಯದ ಧರ್ಮಕರ್ತ

— ಮಹಾತ್ಮಾ ಗಾಂಧಿ

ಈ ದೇಶ ಹೊತ್ತ ಚಿತ್ರ ಸಂದೇಶ ರವರ ಜೊಚ್ಚಲು ಚಿತ್ರ

★

# ಆನೆ - ಹುಡುಗ

## ಅಖಿಲ ಭಾರತದಲ್ಲಿ ಕೂಡಲೇ



## ಗೋವಧೆ ನಿಶೇಧವಾಗಲಿ

**Potect the Cow**

## Help The Gorakshana

— Humanitarian Propoganda Monthly ....

# SHAKTI SUDHA

A Superb Tonic

Bank Road Bahusar A Fair Price Shop in Actuul Practice